1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

## ಕ್ರಿ ಮೊ ಸಂಖ್ಯೆ 315/2021

ಪಿರ್ಯಾದಿ ಃ ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

-ವಿರುದ್ಧ-

ಆರೋಪಿ/ತರು ಃ ರಾಕೇಶನಾಯ್ಕ ಬಿನ್ ರಾಮಾನಾಯ್ಕ

ದಂ.ಪ್ರ.ಸಂ. ಕಲಂ 313 ರಡಿಯಲ್ಲಿ ಆರೋಪಿಯ ವಿಚಾರಣಾ ಹೇಳಿಕೆ

ಪ್ರಶ್ನೆ-1ಃ ಅಭಿಯೋಜನೆ ಪರ ಸಾಕ್ಷಿಗಳ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?
ಉತ್ತರ ಃ ಕೇಳಿದ್ದೇನೆ

ಪ್ರಶ್ನೆ-2ಃ ಪ್ರಾಸಾ-1 ರಘುನಾಥ್.ಎಸ್.ವಿ. ಪಿ.ಎಸ್.ಐ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 11.04.2020 ರಂದು ಬೆಳಿಗ್ಗೆ 10.00 ಗಂಟೆಗೆ ತಾನು ಠಾಣೆಯಲ್ಲಿರುವಾಗ ಚಾಸಾ-9 ರವರು ಕರೆ ಮಾಡಿ ಕರಕುಚ್ಚಿ ತಾಂಡ್ಯದ ರಾಮನಾಯ್ಕರವರ ತೋಟದ ಬಳಿ ಇರುವ ಭದ್ರಾ ಹೊಳೆಯಲ್ಲಿ ರಾಕೇಶ್‌ನಾಯ್ಕ ಅಂದರೆ ಆರೋಪಿಯಾದ ನೀವು ಅಕ್ರಮವಾಗಿ ಮರಳು ತೆಗೆದು ಸಾಗಾಟ ಮಾಡುತ್ತಿರುವುದಾಗಿ ತಿಳಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-3 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಮೇರೆಗೆ ಚಾಸಾ-5 ರಿಂದ 8 ರವರು ಕರೆದುಕೊಂಡು ಇಲಾಖಾ ಜೀಪಿನಲ್ಲಿ 10.10 ಕ್ಕೆ ಠಾಣೆಯನ್ನು ಬಿಟ್ಟು 10.40 ಕ್ಕೆ ಕರಕುಚ್ಚಿ ತಾಂಡ್ಯದ ಬಸ್ ನಿಲ್ದಾಣಕ್ಕೆ ಹೋಗಿದ್ದು, ಚಾಸಾ-9 ರವರು ಅಲ್ಲೇ ಇದ್ದ ಪಂಚರಾದ ಠ್ಯಾಕ್ರನಾಯ್ಕ ಮತ್ತು ಆಕರ್ಷರವರನ್ನು ಕರೆದುಕೊಂಡು ಬಂದಿದ್ದು ಅವರಿಗೆ ನೋಟೀಸ್ ಜಾರಿ ಮಾಡಿ ವಿಚಾರವನ್ನು ತಿಳಿಸಿದ್ದು, 10.50 ಕ್ಕೆ ಅಲ್ಲಿಂದ ಹೊರಟಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-4 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತಾವು 11.00 ಗಂಟೆ ಸಮಯಕ್ಕೆ ಮೋಹನ್ ಕುಮಾರ್ ರವರ ತೋಟದ ಹತ್ತಿರ ಹೋಗುತ್ತಿರುವಾಗ ತಮ್ಮ ಎದುರುಗಡೆ ಒಂದು ಪಿಕ್‌ಅಪ್ ವಾಹನ ಬಂದಿದ್ದು, ತಮ್ಮ ಇಲಾಖಾ ಜೀಪನ್ನು ನೋಡಿ ಸದರಿ ವಾಹವನ್ನು ನಿಲ್ಲಿಸಿ ಆರೋಪಿಯಾದ ನೀವು ಓಡಿ ಹೋಗಿದ್ದು, ನಂತರ ಪಂಚರ ಸಮಕ್ಷಮ ವಾಹನವನ್ನು ಪರಿಶೀಲಿಸಲಾಗಿ ಕೆಎಃ18/ಎ-

8498 ನೋಂದಣಿ ಸಂಖ್ಯೆ ಆಗಿದ್ದು, ಅದರ ತುಂಬಾ ಮರಳು ತುಂಬಿರುವುದು ಕಂಡುಬಂದಿದ್ದು, ನಂತರ ಓಡಿ ಹೋದವನ ಹೆಸರು, ವಿಳಾಸವನ್ನು ಪಂಚರಿಗೆ ಕೇಳಲಾಗಿ ರಾಕೇಶ್‌ನಾಯ್ಕ ಬಿನ್ ರಾಮನಾಯ್ಕ, ಕರಕುಚ್ಚಿ ತಾಂಡ್ಯ ಎಂದು ತಿಳಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-5 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ-6 ರವರಿಂದ 11.15 ರಿಂದ 11.30 ರವರೆಗೆ ಸ್ಥಳದಲ್ಲಿ ವರದಿಯನ್ನು ತಯಾರಿಸಿ, ಠಾಣೆಗೆ ಕಳುಹಿಸಿದ್ದು, ಚಾಸಾ-10 ರವರು ಕರೆ ಮಾಡಿ ಪ್ರಕರಣ ದಾಖಲಾದ ಬಗ್ಗೆ 12.15 ಕ್ಕೆ ಮಾಹಿತಿ ನೀಡಿದ್ದು, ನಂತರ ಪಂಚರ ಸಮಕ್ಷಮ 12.15 ರಿಂದ 01.15 ರವರೆಗೆ ಅಮಾನತ್ತು ಮಹಜರು ಮಾಡಿಕೊಂಡು 02.00 ಗಂಟೆಯ ಸಮಯಕ್ಕೆ ಮಾಲು ಸಮೇತ ಠಾಣೆಗೆ ಬಂದಿದ್ದು, ಅಮಾನತ್ತು ಪಡಿಸಿಕೊಂಡ ಮಾಲನ್ನು ಠಾಣಾ ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-6 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ-5 ರಿಂದ 9 ಮತ್ತು ಪಂಚರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ, ದಿನಾಂಕ 13.04.2020 ರಂದು ಕಾರ್ಯಪಾಲಕ ಅಭಿಯಂತರರು ರವರಿಗೆ ಮರಳಿನ ಮೌಲ್ಯದ ಬಗ್ಗೆ ವರದಿ ನೀಡುವಂತೆ ಮನವಿ ಪತ್ರ ನೀಡಿರುತ್ತೇನೆ, ಅದೇ ದಿನ ಗಣಿ ಮತ್ತು ಭೂ ವಿಜ್ಞಾನ ನಿರ್ದೇಶಕರಿಗೆ ಆರೋಪಿಯ ವಿರುದ್ಧ ಸಿಆರ್.ಪಿ.ಸಿ. ಕಲಂ 200 ರೀತ್ಯಾ ಪ್ರಕರಣ ದಾಖಲಿಸುವಂತೆ ಮನವಿ ಸಲ್ಲಿಸಿರುತ್ತೇನೆ, ನಂತರ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ತರೀಕೆರೆ ಇವರಿಗೆ ಮರಳು ತೆಗೆದ ಜಾಗದ ದಾಖಲೆಯನ್ನು ನೀಡುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ, ನಂತರ ದಿನಾಂಕ 20.05.2020 ರಂದು ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-11 ರವರಿಗೆ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-7 ಃ ಪ್ರಾಸಾ-4 ಅಣ್ಣಯ್ಯ.ಎಂ.ಹೆಚ್. ಪಿ.ಸಿ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 11.04.2020 ರಂದು ಬೆಳಿಗ್ಗೆ 10.00 ಗಂಟೆಗೆ ಚಾಸಾ-1 ರವರು ಠಾಣೆಯಲ್ಲಿರುವಾಗ ಚಾಸಾ-9 ರವರು ಕರೆ ಮಾಡಿ ಕರಕುಚ್ಚಿ ತಾಂಡ್ಯದ ರಾಮನಾಯ್ಕರವರ ತೋಟದ ಬಳಿ ಇರುವ ಭದ್ರಾ ಹೊಳೆಯಲ್ಲಿ ರಾಕೇಶ್‌ನಾಯ್ಕ ಅಂದರೆ ಆರೋಪಿಯಾದ ನೀವು ಅಕ್ರಮವಾಗಿ ಮರಳು ತೆಗೆದು ಸಾಗಾಟ ಮಾಡುತ್ತಿರುವುದಾಗಿ ತಿಳಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-8 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಮೇರೆಗೆ ಚಾಸಾ-5, 6 ಹಾಗೂ ತನ್ನನ್ನು ಕರೆದುಕೊಂಡು ಇಲಾಖಾ ಜೀಪಿನಲ್ಲಿ 10.10 ಕ್ಕೆ ಠಾಣೆಯನ್ನು ಬಿಟ್ಟು 10.40 ಕ್ಕೆ ಕರಕುಚ್ಚಿ ತಾಂಡ್ಯದ ಬಸ್ ನಿಲ್ದಾಣಕ್ಕೆ ಹೋಗಿದ್ದು, ಚಾಸಾ-9 ರವರು ಅಲ್ಲೇ ಇದ್ದ ಪಂಚರಾದ ತ್ಯಾಕ್ರನಾಯ್ಕ ಮತ್ತು ಆಕರ್ಷರವರನ್ನು ಕರೆದುಕೊಂಡು ಬಂದಿದ್ದು ಅವರಿಗೆ ನೋಟೀಸ್ ಜಾರಿ ಮಾಡಿ ವಿಚಾರವನ್ನು ತಿಳಿಸಿದ್ದು, 10.50 ಕ್ಕೆ ಅಲ್ಲಿಂದ ಹೊರಟಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-9 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತಾವು 11.00 ಗಂಟೆ ಸಮಯಕ್ಕೆ ಮೋಹನ್ ಕುಮಾರ್ ರವರ ತೋಟದ ಹತ್ತಿರ ಹೋಗುತ್ತಿರುವಾಗ ತಮ್ಮ ಎದುರುಗಡೆ ಒಂದು ಪಿಕ್‌ಅಪ್ ವಾಹನ ಬಂದಿದ್ದು, ತಮ್ಮ ಇಲಾಖಾ ಜೀಪನ್ನು ನೋಡಿ ಸದರಿ ವಾಹವನ್ನು ನಿಲ್ಲಿಸಿ ಆರೋಪಿಯಾದ ನೀವು ಓಡಿ ಹೋಗಿದ್ದು, ನಂತರ ಪಂಚರ ಸಮಕ್ಷಮ ವಾಹನವನ್ನು ಪರಿಶೀಲಿಸಲಾಗಿ ಕೆಎಃ18/ಎ-8498 ನೋಂದಣಿ ಸಂಖ್ಯೆ ಆಗಿದ್ದು, ಅದರ ತುಂಬಾ ಮರಳು ತುಂಬಿರುವುದು ಕಂಡುಬಂದಿದ್ದು, ನಂತರ ಓಡಿ ಹೋದವನ ಹೆಸರು, ವಿಳಾಸವನ್ನು ಪಂಚರಿಗೆ ಕೇಳಲಾಗಿ ರಾಕೇಶ್‌ನಾಯ್ಕ ಬಿನ್ ರಾಮನಾಯ್ಕ, ಕರಕುಚ್ಚಿ ತಾಂಡ್ಯ ಎಂದು ತಿಳಿಸಿದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-10 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ-6 ರವರಿಂದ 11.15 ರಿಂದ 11.30 ರವರೆಗೆ ಸ್ಥಳದಲ್ಲಿ ವರದಿಯನ್ನು ತಯಾರಿಸಿ, ಠಾಣೆಗೆ ಕಳುಹಿಸಿದ್ದು, ಚಾಸಾ-10 ರವರು ಕರೆ ಮಾಡಿ ಪ್ರಕರಣ ದಾಖಲಾದ ಬಗ್ಗೆ 12.15 ಕ್ಕೆ ಮಾಹಿತಿ ನೀಡಿದ್ದು, ನಂತರ ಪಂಚರ ಸಮಕ್ಷಮ 12.15 ರಿಂದ 01.15 ರವರೆಗೆ ಅಮಾನತ್ತು ಮಹಜರು ಮಾಡಿಕೊಂಡು 02.00 ಗಂಟೆಯ ಸಮಯಕ್ಕೆ ಮಾಲು ಸಮೇತ ಠಾಣೆಗೆ ಬಂದಿದ್ದು, ಅಮಾನತ್ತು ಪಡಿಸಿಕೊಂಡ ಮಾಲನ್ನು ಠಾಣಾ ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ, ಮಹಜರು ಕಾಲದಲ್ಲಿ ಛಾಯಚಿತ್ರವನ್ನು ತೆಗೆದಿದ್ದು 65(ಬಿ) ದೃಢೀಕರಣ ಪತ್ರವನ್ನು ತಾನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-11 ಃ ಪ್ರಾಸಾ-5 ಶ್ರೀಮತಿ ಮೇಘ.ಟಿ.ಎನ್. ಪಿ.ಎಸ್.ಐ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 06.07.2020 ರಂದು ಚಾಸಾ-4 ರವರು ನೀಡಿದ ವರದಿಯನ್ನು ಸ್ವೀಕರಿಸಿ, ನಂತರ ಈ ಪ್ರಕರಣದಲ್ಲಿ ಆರೋಪಿಯಾದ ನಿಮ್ಮ ಮೇಲೆ ಆರೋಪ ಸಾಬೀತಾದ ಕಾರಣ ಆರೋಪಿಯಾದ ನಿಮ್ಮ ವಿರುದ್ಧ ದೋಷಾರೋಪಣಾ

ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-12 ಃ ಈ ಕೇಸಿನ ಬಗ್ಗೆ ನೀವು ಏನಾದರೂ ಹೇಳುವುದಿದೆಯಾ?

ಉತ್ತರ ಃ ಇಲ್ಲ

ಪ್ರಶ್ನೆ-13 ಃ ನಿಮ್ಮ ಪರವಾಗಿ ಯಾರಾದರೂ ಸಾಕ್ಷಿಗಳಿದ್ದಾರಾ ಮತ್ತು ಯಾವುದಾದರೂ ದಾಖಲೆಗಳಿವೆಯಾ?

ಉತ್ತರ ಃ ಇಲ್ಲ

(ಈ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ನಾನೇ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕ ಃ 13.07.2026

ಸಹಿ

**(ಊರ್ಮಿಳ.ವಿ)**

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.